# Bhuvanendra Theertharu


## 1785- 1799

## Ashrama Gurugalu – Varadendra Theertharu

## Vidya Gurugalu – Sri Dheerendra Theertharu

## Ashrama Shishyaru – Sri Subodendra Theertharu

**ಶ್ರೀ ಭುವನೇಂದ್ರಗುರುಂ ವಂದೇ ದುರ್ಮತಧ್ವಾಂತಭಾಸ್ಕರ: ।**
**ಚಿಂತಾಮಣಿಂ ಸ್ವಾಶ್ರಿತಾನಾಂ ಭಜತಾಂ ಕಲ್ಪಪಾದಪಮ್ ॥**



# ವೃಂದಾವನ – ರಾಜೋಳ್ಳಿ

# ಆರಾಧನ – ವೈಶಾಖ ಬಹುಳ ಸಪ್ತಮಿ

## ಪೂರ್ವಾಶ್ರಮ ನಾಮ - ಲಕ್ಷ್ಮೀನಾರಾಯಣಾಚಾರ್ಯರು

# ರಚಿಸಿದ ಗ್ರಂಥ – ಋಗ್ಭಾಷ್ಯ ಟೀಕಾ

ಭುವನೇಂದ್ರತೀರ್ಥರ ತಂದೆ – ವೇಣುಗೋಪಾಲಾಚಾರ್ಯರು.

- ವೇಣುಗೋಪಾಲಾಚಾರ್ಯರು ವಾದೀಂದ್ರತೀರ್ಥರ ಪೂರ್ವಾಶ್ರಮದ ಸಹೋದರರು.
- ವೇಣುಗೋಪಾಲಾಚಾರ್ಯರಿಗೆ ಮೂರು ಮಕ್ಕಳು – ಎಲ್ಲರೂ ಒಂದಲ್ಲ ಒಂದು ಕಾಲದಲ್ಲಿ ರಾಯರ ಮಠದ ಪರಂಪರೆಯಲ್ಲಿ ಯತಿಗಳು – ಅವರುಗಳೆಂದರೆ

  ಅ. ಪುರುಷೋತ್ತಮಾಚಾರ್ಯರು – ವಸುದೇಂದ್ರತೀರ್ಥರು

  ಆ. ಬಲರಾಮಾಚಾರ್ಯರು – ವರದೇಂದ್ರತೀರ್ಥರು

  ಇ. ಲಕ್ಷ್ಮೀನಾರಾಯಣಾಚಾರ್ಯರು - ಭುವನೇಂದ್ರತೀರ್ಥರು.

ಶ್ರೀವಸುದೇಂದ್ರತೀರ್ಥರು ತಮ್ಮ ಗುರುಗಳ ಇಚ್ಛೆಯಂತೆ ಶ್ರೀ ಜಯರಾಮಾಚಾರ್ಯರಿಗೆ ಆಶ್ರಮ ಕೊಡಲು ಸಿದ್ಧವಾಗಿದ್ದರು. ಆದರೆ ಜಯರಾಮಾಚಾರ್ಯರು ಅವರಿಗೆ ಆ ಸಮಯದಲ್ಲಿ ಸಿಗಲಿಲ್ಲ. ಆಗ ಅವರು ತಮ್ಮ ತಮ್ಮನಾದ ಬಲರಾಮಾ ಚಾರ್ಯರಿಗೆ ನೀಡಿದರು. ಅದೇ ರೀತಿ ವರದೇಂದ್ರತೀರ್ಥರೂ ಕೂಡ ಆಶ್ರಮವನ್ನು ಜಯರಾಮಾಚಾರ್ಯರಿಗೆ ಕೊಡಲು ಇಷ್ಟಪಟ್ಟಾಗ, ಅವರ ಕೊನೆ ಗಳಿಗೆಯಲ್ಲಿ ಆಚಾರ್ಯರು

ಸಿಗದಿದ್ದಾಗ, ತಮ್ಮ ತಮ್ಮನಾದ ಲಕ್ಷ್ಮೀನಾರಾಯಣಾಚಾರ್ಯರಿಗೆ ಆಶ್ರಮ ನೀಡಿದರು. ಇಷ್ಟರಲ್ಲಿ ಜಯರಾಮಾಚಾರ್ಯರು ಕುಂಭಕೋಣದಲ್ಲಿ ವಿಜಯೀಂದ್ರರ ವೃಂದಾವನದ ಮುಂದೆ ಆಶ್ರಮ ಸ್ವೀಕರಿಸಿದರು. ಶ್ರೀ ಭುವನೇಂದ್ರತೀರ್ಥರು ಧೀರೇಂದ್ರತೀರ್ಥರಿಗೆ ಮೂಲರಾಮನ ಸಂಸ್ಥಾನದ ಸಂಪೂರ್ಣ ಅಧಿಕಾರವನ್ನು ವಹಿಸಿದರು. ಸ್ವಲ್ಪ ಕಾಲ ಸಂಸ್ಥಾನದ ಜವಾಬ್ದಾರಿ ವಹಿಸಿ, ಮತ್ತೆ ಅದನ್ನು ಶ್ರೀ ಭುವನೇಂದ್ರತೀರ್ಥರಿಗೇ ವಹಿಸಿದರು. ಶ್ರೀಭುವನೇಂದ್ರರು ಹೆಚ್ಚಿನ ವಿದ್ಯೆಯನ್ನು ಧೀರೆಂದ್ರತೀರ್ಥರಿಂದಲೇ ಪಡೆದರು.

## ಶ್ರೀಭುವನೇಂದ್ರತೀರ್ಥ ಸುಪ್ರಭಾತಮ್

ಶ್ರೀಮಧ್ವತಂತ್ರಪರಿಪಾಲನದಿವ್ಯಕೀರ್ತೇ
ಶ್ರೀಮೂಲರಾಮಚರಣಾರ್ಚನ ಪುಣ್ಯಮೂರ್ತೇ ।
ಶ್ರೀರಾಮಭೂಪಪರಿರಕ್ಷಣ ಸತ್ವಪೂರ್ತೇ
ಭೂಯಾತ್ಪ್ರಭಾತಮಮಲಂ ಭುವನೇಂದ್ರತೀರ್ಥ ॥ ೧ ॥

ಸೂರೀಂದ್ರವಂದ್ಯವರದೇಂದ್ರಕರಾಬ್ಜಜಾತ
ಧೀರೆಂದ್ರಸಂಯಮಿದಯಾಪ್ತ ಸಮಸ್ತತಂತ್ರ ।
ಭೂಮೀಂದ್ರಧೀಂದ್ರನಿವಹಾರ್ಚಿತಪಾದಪದ್ಮ
ಕ್ಷೋಣೀಂದ್ರತೀರ್ಥ ಭವತಾತ್ತವ ಸುಪ್ರಭಾತಮ್ ॥ ೨ ॥